# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 570 (498) |
| ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 09.03.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನವ ಆನೆ ಸಂಘರ್ಷ ಹೆಚ್ಚಾಗುತ್ತಿದ್ದು, ಇದು ಅನೇಕ ಜೀವಗಳು ಕಳೆದುಕೊಳ್ಳುತ್ತಿದ್ದರೂ. ಸರ್ಕಾರ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದೇ ವಿಫಲವಾಗಿದೆ ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು: | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನವ ಹಾಗೂ ಕಾಡಾನೆಗಳ ಸಂಘರ್ಷ ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಿ, ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಹಾಗೂ ಸಹಬಾಳ್ವೆ ಮೂಡಿಸುವ ಸಭೆ / ಕಾರ್ಯಾಗಾರ ಏರ್ಪಡಿಸಲಾಗುತ್ತಿದೆ.<br>2. ಬೆಳೆ ಹಾನಿ ಪ್ರಕರಣಗಳಲ್ಲಿ ಕೂಡಲೇ ಸರಕಾರದ ಆದೇಶದ ಪ್ರಕಾರ ಪರಿಹಾರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಲಾಗಿದೆ.<br>3. ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>4. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ನಿಯಂತ್ರಣ ಕಾರ್ಯಕ್ಕಾಗಿ ತೊಡಗಿಸಿಕೊಳ್ಳಲಾಗುತ್ತಿದೆ.<br>5. ಆನೆ ನಿರೋಧಕ ಕಂದಕ ನಿರ್ಮಾಣ, ಹಳ್ಳ ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತು ಸೋಲಾರ್ ಟೆಂಟೆಕಲ್ ಬೇಲಿಯನ್ನು ಮಾಡಲಾಗಿರುತ್ತದೆ.<br>6. ಬೇರೆ ವಿಭಾಗಗಳಲ್ಲಿನ ಎಲಿಫೆಂಟ್ ಟ್ರಾಕರ್ಸ್ ಗಳು ನುರಿತ ಆನೆ ಕಾವಾಡಿಗರು ಹಾಗೂ ವೈದ್ಯರ ಸಹಯೋಗವನ್ನು ಪಡೆದು ಊರಿಗೆ ಬಂದ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಿರುವ ಹಾಗೂ ಸೆರೆಹಿಡಿಯುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.<br>7. ಕಾಡಾನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ.<br>8. ರಾತ್ರಿ ಗಸ್ತು ತಂಡವನ್ನು ರಚಿಸಿಕೊಂಡು ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ.<br>9. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿಗಳ ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮ ಕೈಗೊಳ್ಳಲಾಗಿದೆ.<br><br>**ತಂತ್ರಜ್ಞಾನ ಬಳಕೆ:**<br><br>• ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಿ, ತುರ್ತು ಘಟನೆಗಳಿಗೆ ತಕ್ಷಣ ಪ್ರತಿಕ್ರಿಯಿಸಲು ಕೇಂದ್ರ ಸ್ಥಾನದಲ್ಲಿ ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ (ICCC) ಹಾಗೂ ದಕ್ಷಿಣ ಕನ್ನಡ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

ಜಿಲ್ಲೆಯಲ್ಲಿ ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC) ಸ್ಥಾಪಿಸಲಾಗಿದೆ.

- ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆ, ಹುಲಿ, ಚಿರತೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.
- ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.
- ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.
- ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "AI" Based Camera ಗಳನ್ನು ಅಳವಡಿಸಲಾಗಿದ್ದು, ಅವುಗಳ ಮೂಲಕ ಹಾಗೂ ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.

ಮುಂದುವರಿದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನವ ಆನೆ ಸಂಘರ್ಷದಿಂದಾಗಿ ಕಳೆದ 04 ವರ್ಷಗಳಲ್ಲಿ ಸಾವಿಗೀಡಾದ ಪ್ರಕರಣಗಳ ವಿವರ ಹಾಗೂ ಪರಿಹಾರ ಪಾವತಿ ವಿವರ ಈ ಕೆಳಕಂಡಂತಿದೆ.

| ವರ್ಷ | ಮೃತಪಟ್ಟವರ ವಿವರ (ಹೆಸರು & ವಿಳಾಸ) ಮತ್ತು ಕಾಡುಪ್ರಾಣಿಯ ಜಾತಿ | | ಪಾವತಿಸಿರುವ ದಯಾತ್ಮಕ ಧನ (ರೂ. ಲಕ್ಷಗಳಲ್ಲಿ) | ಮೃತರ ಕುಟುಂಬಸ್ಥರಿಗೆ ಪಾವತಿಸಿದ ಮಾಸಾಶನದ ವಿವರ (ರೂ.) | ಘಟನೆ ನಡೆದ ದಿನಾಂಕ |
|---|---|---|---|---|---|
| 2022-23 | 1 | ಶ್ರೀ ತಿಮ್ಮಪ್ಪ, ಬಿನ್ ಪೂವಿಯಾ, ಜನತಾ ಕಾಲೊನಿ ಶಿರಾಡಿ ಗ್ರಾಮ, ಕಡಬ ತಾಲ್ಲೂಕು (ಕಾಡಾನೆ) | 15.00 | 1,36,133/ | 31-12-2022 |
| | 2 | ಕು॥ ರಂಜಿತಾ ನೈಲ ನಿವಾಸಿ, ರೆಂಜಿಲಾಡಿ ಗ್ರಾಮ, ಕಡಬ ತಾಲ್ಲೂಕು (ಕಾಡಾನೆ) | 15.00 | 1,29,333/- | 20-02-2023 |
| | 3 | ಶ್ರೀ ರಮೇಶ್ ರೈ, ರೆಂಜಿಲಾಡಿ ಗ್ರಾಮ, ಕಡಬ ತಾಲ್ಲೂಕು (ಕಾಡಾನೆ) | ಸದರಿಯವರು ಅವಿವಾಹಿತರಾಗಿದ್ದು, ತಂದೆ-ತಾಯಿಗಳು ಸಹ ಮೃತಪಟ್ಟಿದ್ದು, ಸಂಬಂಧಪಟ್ಟ ರಕ್ತ ಸಂಬಂಧಿಗಳು ಯಾರು ಇಲ್ಲವೆಂದು ತಹಶೀಲ್ದಾರ್, ಕಡಬ ತಾಲ್ಲೂಕು ಇವರು ವರದಿಸಿರುವುದರಿಂದ ಸದರಿ ಪ್ರಕರಣದಲ್ಲಿ ದಯಾತ್ಮಕ ಧನವನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ. | | 20-02-2023 |
| 2023-24 | 1 | ಶ್ರೀ ಚೋಮ, ಬಿನ್. ಓಡಿ ಮುಗೇರ, ಗೇರ್ತಿಲ ಮನೆ, ಐತ್ತೂರು ಗ್ರಾಮ, ಕಡಬ ತಾಲ್ಲೂಕು (ಕಾಡಾನೆ) | 15.00 | 95,200/- | 07-11-2023 |
| 2024-25 | | - | - | - | |
| 2025-26 | 1 | ಶ್ರೀಮತಿ ಸೆಲ್ಲಮ್ಮ, ಕೋಂ ತಿಲಗಂ, ಕೆಯ್ಯೂರು ಮನೆ, ಕೊಳ್ತಿಗೆ ಗ್ರಮ, ಪುತ್ತೂರು ತಾಲ್ಲೂಕು (ಕಾಡಾನೆ) | 20.00 | 24,266/- | 29-04-2025 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td><table><tr><td></td><td>2</td><td>ಶ್ರೀ ಬಾಲಕೃಷ್ಣ ಶೆಟ್ಟಿ, ಸೌತಡ್ಕ ಮನೆ, ಕೊಕ್ಕಡ ಗ್ರಾಮ, ಬೆಳ್ತಂಗಡಿ ತಾಲ್ಲೂಕು (ಕಾಡಾನೆ)</td><td>20.00</td><td>13,935/-</td><td>17-07-2025</td></tr></table></td></tr>
<tr><td>ಆ)</td><td>ಆನೆ ಸಂಘರ್ಷ ತಡೆಯಲು ಎಲಿಫೆಂಟ್ ಟಾಸ್ಕ್ ಫೋರ್ಸ್ ರಚಿಸುವುದಾಗಿ ತಿಳಿಸಿದ್ದರೂ ಇನ್ನೂ ಕಾರ್ಯಗತಗೊಳ್ಳದೇ ಇರಲು ಕಾರಣವೇನು:</td><td>ಕಾಡಾನೆಗಳ ದಾಳಿಯನ್ನು ನಿಯಂತ್ರಿಸಲು ಸರ್ಕಾರದ ಆದೇಶ ಸಂಖ್ಯೆ:FEE 235 FWL 2025 ದಿನಾಂಕ:02.03.2026 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರ ವಿಭಾಗಕ್ಕೆ ಆನೆ ಕಾರ್ಯಪಡೆಯನ್ನು (Elephant Task Force) ರಚಿಸಿ ಆದೇಶಿಸಿದೆ.</td></tr>
<tr><td>ಇ)</td><td>ಕಾಡುಗಳಲ್ಲಿರುವ ಪ್ರಾಣಿಗಳು ಇತ್ತೀಚೆಗೆ ರಸ್ತೆಗಳಿಗೆ ಬಂದು ಅಮಾಯಕರ ಜೀವ ತೆಗೆದುಕೊಳ್ಳುವುದರ ಜೊತೆಗೆ ಕೃಷಿ ನಾಶ ಮಾಡುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)</td><td>1. ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಿ, ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಹಾಗೂ ಸಹಬಾಳ್ವೆ ಮೂಡಿಸುವ ಸಭೆ / ಕಾರ್ಯಾಗಾರ ಏರ್ಪಡಿಸಲಾಗುತ್ತಿದೆ.<br>2. ಬೆಳೆ ಹಾನಿ ಪ್ರಕರಣಗಳಲ್ಲಿ ಕೂಡಲೇ ಸರಕಾರದ ಆದೇಶದ ಪ್ರಕಾರ ಪರಿಹಾರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಲಾಗಿದೆ.<br>3. ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>4. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ನಿಯಂತ್ರಣ ಕಾರ್ಯಕ್ಕಾಗಿ ತೊಡಗಿಸಿಕೊಳ್ಳಲಾಗುತ್ತಿದೆ.<br>5. ಆನೆ ನಿರೋಧಕ ಕಂದಕ ನಿರ್ಮಾಣ, ಹಳ್ಳ ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತು ಸೋಲಾರ್ ಟೆಂಟಿಕಲ್ ಬೇಲಿಯನ್ನು ಮಾಡಲಾಗಿರುತ್ತದೆ.<br>6. ಬೇರೆ ವಿಭಾಗಗಳಲ್ಲಿನ ಎಲಿಫೆಂಟ್ ಟ್ರಾಕರ್ಸ್ ಗಳು ನುರಿತ ಆನೆ ಕಾವಾಡಿಗರು ಹಾಗೂ ವೈದ್ಯರ ಸಹಯೋಗವನ್ನು ಪಡೆದು ಊರಿಗೆ ಬಂದ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಿರುವ ಹಾಗೂ ಸೆರೆಹಿಡಿಯುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.<br>7. ಕಾಡಾನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ.<br>8. ರಾತ್ರಿ ಗಸ್ತು ತಂಡವನ್ನು ರಚಿಸಿಕೊಂಡು ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ.<br>9. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿಗಳ ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮ ಕೈಗೊಳ್ಳಲಾಗಿದೆ.</td></tr>
</table>

**ಇ-ಸಂಖ್ಯೆ: ಅಪಜೀ 70 ಎಫ್‌ಡಬ್ಲ್ಯೂಎಲ್ 2026**

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು